ಒ. ಎಸ್ಃ 32/2021
ಪಿ.ಡಬ್ಲ್ಯೂಃ01

<u>ದಿಃ 19.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಆರ್. ವಕೀಲರಿಂದ</u>

12) ನನ್ನ ತಾಯಿ ಲೀಲಾವತಮ್ಮ ಹಾಗೂ ಶ್ರೀಯುತ ಅಬ್ದುಲ್ ರೆಹಮಾನ್ ರವರು ಅವರವರ ಜಮೀನುಗಳನ್ನು ಅದಲು ಬದಲು ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತು 2 ಅಂದರೆ ಸ.ನಂ.31/1 ನ್ನು 2 ನೇ ಪ್ರತಿವಾದಿ ಮುರಳೀ ಕೃಷ್ಣ ರವರು ಕ್ರಯಕ್ಕೆ ದಿನಾಂಕ 25.07.1996 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಸ್ವತಃ ಸ.ನಂಗಳನ್ನು ನನಗೆ ಹೇಳಲು ಬರುವುದಿಲ್ಲ ಎಲ್ಲವನ್ನೂ ನಮ್ಮ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

13) ನಾನು ನಿಶಾನೆ ಪಿ 1 ನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಿಶಾನೆ ಪಿ 2 ಮತ್ತು 3 ನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನನ್ನ ತಂದೆಯ ಮರಣಾನಂತರ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ತಮ್ಮ 2 ನೇ ಪ್ರತಿವಾದಿ ಕೃಷಿಯೇತರ ಜಮೀನಿಗಾಗಿ ಭೂ ಪರಿವರ್ತನೆ ಮಾಡಿಸಿಕೊಳ್ಳುವ ಸಲುವಾಗಿ ಅರ್ಜಿಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ನೀಡಿ ಅವರ ಆದೇಶ ಪ್ರಕಾರ ಜಮೀನುಗಳು ಎಲ್ಲಾ ಕೃಷಿಯೇತರ ಭೂ ಪರಿವರ್ತನೆ ಆಗಿರುತ್ತದೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ.

14) ದಿನಾಂಕ 30.04.2015 ರಂದು 2 ನೊಂದಾಯಿತ ಜಿಪಿಎ ಗಳನ್ನು ನನ್ನ ತಾಯಿ ಮತ್ತು ನನ್ನ ತಮ್ಮ 5 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ನೊಂದಾಯಿತ ಪತ್ರಕ್ಕೆ ನಾನು ಲತಾ, ವಿಜಯ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮೂಲ ಜಿಪಿಎ ಗಳನ್ನು ತೋರಿಸಿ ಅದರಲ್ಲಿರುವ ಸಹಿಗಳು ತಮ್ಮದೇ ಎಂದು ತೋರಿಸಲಾಗಿದ್ದು, ಸಾಕ್ಷಿಯು ಒಪ್ಪಿ ಕೊಳ್ಳದೇ ಇರುವ ಕಾರಣಕ್ಕೆ ಅದನ್ನು ಗುರುತು ಮಾಡಿರುವುದಿಲ್ಲ.

15) ನಂಜುಂಡಪ್ಪ ಎನ್ನುವವರು ನನ್ನ ತಾಯಿ ಮತ್ತು ನನ್ನ ತಮ್ಮನ ವಿರುದ್ಧ ಮೂಲ ದಾವೆ ಸಂಃ 308/2013 ನ್ನು ಮಾನ್ಯ ಆಗಿನ ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯನ್ನು ಈ ದಾವೆಯ 5 ನೇ ಪ್ರತಿವಾದಿ ನಂಜುಂಡಪ್ಪನವರಿಗೆ 22 ಲಕ್ಷ ಹಣವನ್ನು ನೀಡಿ ದಾವೆಯನ್ನು ರಾಜೀ ಮಾಡಿಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16) ದಾವಾ ಅನುಸೂಚಿ ಸ್ವತ್ತುಗಳನ್ನು ಭೂ ಪರಿವರ್ತನೆ ಆದ ನಂತರ ನಮ್ಮ ಕುಟುಂಬದ ಅವಶ್ಯಕತೆಗಾಗಿ ನನ್ನ ತಾಯಿ ಮತ್ತು ನನ್ನ ಸಹೋದರ ನಮ್ಮಗಳ ಸಹಿಗಳನ್ನು ಜಿಪಿಎ ಮೂಲಕ ತೆಗೆದುಕೊಂಡು 5 ನೇ ಪ್ರತಿವಾದಿಗೆ ಕಾನೂನು ರೀತಿ ಮಾರಾಟ ಮಾಡಿದ್ದು ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

17) ಸದರಿ ಭೂ ಪರಿವರ್ತನೆ ಆದ ನಂತರ ಸಿಎ ಸೈಟುಗಳನ್ನು ಸಂಬಂಧಪಟ್ಟ ಇಲಾಖೆಗೆ ನೊಂದಾಯಿತ ಹಕ್ಕು ನಿವೃತ್ತಿ ದಾಖಲೆಯ ಪ್ರಕಾರ ಬಿಟ್ಟುಕೊಟ್ಟಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳು ಈಗ ಕೃಷಿ ಜಮೀನು ಆಗಿಲ್ಲದೇ ಭೂ ಪರಿವರ್ತನೆಗೊಂಡು ನಿವೇಶನಗಳು ಆಗಿ ಅನೇಕ ಜನರಿಗೆ ಮಾರಾಟವಾಗಿದ್ದು ಅದರಲ್ಲಿ ಕೆಲವರು ಮನೆಗಳನ್ನು ಕೂಡ ಕಟ್ಟಿಕೊಂಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.

ಸಾಕ್ಷಿಗೆ ನ್ಯಾಯಾಲಯದಲ್ಲಿರುವ ಎಲ್ಲಾ ದಾಖಲೆಗಳನ್ನು ನೀಡಿ ಅವರು ಗುರುತಿಸುವ ವಿಚಾರಗಳನ್ನು ಹಾಗೂ ಅವರು ಹೇಳುವ ವಿಚಾರಗಳನ್ನು ನ್ಯಾಯಾಲಯವು ಬರೆದುಕೊಳ್ಳಲಾಗುವುದು ಎಂದು ಅವರಿಗೆ ತಿಳಿಸಿ ಅವರು ಸಾಕ್ಷಿ ನುಡಿಯಲು ಕೋರಲಾಗಿರುತ್ತದೆ.